# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 441 |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.02.2024 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯ ಮಂತ್ರಿಯವರು |

****

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸುತ್ತಿರುವ ಡಾ: ಶಿವರಾಮ ಕಾರಂತ ಅಧಿಸೂಚನೆ ವ್ಯಾಪ್ತಿಯಲ್ಲಿ ಇಲ್ಲದ ಕಂದಾಯ ನಿವೇಶನಗಳಲ್ಲಿ ಅಥವಾ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಲು ಅಥವಾ ದುರಸ್ಥಿ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಅನುಮತಿ ಪಡೆಯುವುದು ಕಡ್ಡಾಯವೇ; | ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಿರುತ್ತದೆ. |
| ಆ | ಕಡ್ಡಾಯವಾಗಿದ್ದಲ್ಲಿ ಅನುಮತಿ ಪಡೆಯಲು ಸಲ್ಲಿಸಬೇಕಾದ ದಾಖಲಾತಿಗಳು ಯಾವುವು; | ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಅನುಮತಿ ಪಡೆಯಲು ಸಲ್ಲಿಸಬೇಕಾದ ದಾಖಲಾತಿಗಳು:<br>• ಮಾಲೀಕತ್ವವನ್ನು ದೃಢೀಕರಿಸುವ ದಾಖಲೆ (ಕ್ರಯಪತ್ರ, ವಿಭಾಗ ಪತ್ರ, ದಾನಪತ್ರ ಮತ್ತು ಇತರೆ);<br>• ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಖಾತಾ ಪತ್ರ;<br>• ಕಂದಾಯ ಪಾವತಿ ರಶೀದಿ;<br>• ಋಣಭಾರ ರಾಹಿತ್ಯ ಪ್ರಮಾಣ ಪತ್ರ;<br>• ವಲಯ ನಿಯಮಾವಳಿಗಳಂತೆ ತಯಾರಿಸಿದ ಕಟ್ಟಡ ನಕ್ಷೆಗಳು;<br>• ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ವಿನ್ಯಾಸ ನಕ್ಷೆಯ ದೃಢೀಕೃತ ಪ್ರತಿ; |
| ಇ | ಡಾ: ಶಿವರಾಮ ಕಾರಂತ ಬಡಾವಣೆಯ ಅಧಿಸೂಚನೆಯ ವ್ಯಾಪ್ತಿಯಲ್ಲಿ ಇಲ್ಲದ ಜಮೀನು ವಿಭಾಗ ಪತ್ರ ನೋಂದಣಿ ಮಾಡಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯವೇ; ಕಡ್ಡಾಯವಾಗಿದ್ದಲ್ಲಿ ಆದೇಶದ ಪ್ರತಿಯನ್ನು ನೀಡುವುದು. | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 344 ಮುನೋಮ 2008, ದಿನಾಂಕ:06.04.2009 ರಂತೆ ನಿವೇಶನಗಳ ನೋಂದಣಿಗೆ ನಿಗದಿಪಡಿಸಿರುವ ಅಗತ್ಯವಾದ ದಾಖಲೆಗಳನ್ನು ಪಕ್ಷಕಾರರು ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಹಾಜರುಪಡಿಸಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದ್ದು, ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಮುನೋಮು 2013, ದಿನಾಂಕ: 18-07-2014ರಂತೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆದು ನೋಂದಾಯಿಸಲಾಗುತ್ತಿದೆ. |

<table>
<tr>
<td>ಈ</td>
<td>ಡಾ: ಶಿವರಾಮ ಕಾರಂತ ಬಡಾವಣೆಯ ವ್ಯಾಪ್ತಿಯ ಎಷ್ಟು ಸಾರ್ವಜನಿಕರು ನಿವೇಶನ ಮಾರಾಟಕ್ಕೆ/ವಿಭಾಗ ಪತ್ರ ನೋಂದಣಿಗೆ ನಿರಾಕ್ಷೇಪಣಾ ಪತ್ರಕ್ಕೆ ಅರ್ಜಿ ಸಲ್ಲಿಸಿದ್ದಾರೆ; ಎಷ್ಟು ಜನತೆಗೆ ನಿರಾಕ್ಷೇಪಣಾ ಪತ್ರಗಳನ್ನು ನೀಡಲಾಗಿದೆ; ನಿರಾಕ್ಷೇಪಣಾ ಪತ್ರ ನೀಡುವುದು ತಡವಾದ ಕಾರಣ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಿರಾಕ್ಷೇಪಣಾ ಪತ್ರ ಸಕಾಲದಲ್ಲಿ ದೊರೆಯುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?</td>
<td>ಡಾ: ಕೆ.ಶಿವರಾಮ ಕಾರಂತ ಬಡಾವಣೆಯ ವ್ಯಾಪ್ತಿಯ ಈ ಕೆಳಕಂಡ ಗ್ರಾಮಗಳಲ್ಲಿ ಸಾರ್ವಜನಿಕರು ನಿವೇಶನ ಮಾರಾಟಕ್ಕೆ ನಿರಾಕ್ಷೇಪಣಾ ಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.
<table>
<tr><th>ಗ್ರಾಮದ ಹೆಸರು</th><th>ಸ್ವೀಕೃತವಾದ ಅರ್ಜಿಗಳ ಸಂಖ್ಯೆ</th><th>ಹಿಂಬರಹ ನೀಡಲಾದ ಸಂಖ್ಯೆ</th><th>ಬಾಕಿ</th></tr>
<tr><td>ಜಾರಕಬಂಡೆಕಾವಲ್ ಮತ್ತು ವೀರಸಾಗರ</td><td>03</td><td>02</td><td>01</td></tr>
<tr><td>ಆವಲಹಳ್ಳಿ</td><td>01</td><td>0</td><td>01</td></tr>
<tr><td>ದೊಡ್ಡಬೆಟ್ಟಹಳ್ಳಿ</td><td>06</td><td>03</td><td>03</td></tr>
<tr><td>ವಡೇರಹಳ್ಳಿ</td><td>10</td><td>06</td><td>04</td></tr>
<tr><td>ಒಟ್ಟು</td><td>20</td><td>11</td><td>09</td></tr>
</table>
ನಿಗದಿತ ಕಾಲಮಿತಿಯೊಳಗೆ ನಿಯಮಾನುಸಾರ ಕೋರಿಕೆಗಳನ್ನು ಇತ್ಯರ್ಥಪಡಿಸಲು ಸೂಚಿಸಲಾಗಿದೆ.</td>
</tr>
</table>

**ಸಂಖ್ಯೆ: ನಅಇ 39 ಬೆಂಭೂಸ್ವಾ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ